ಸಹಕಾರಿ ಸಂಘಗಳಲ್ಲಿನ ಎಲ್ಲಾ ಸದಸ್ಯರುಗಳಿಗೆ ಫೋಟೋ ಗುರುತಿನ ಪತ್ರ ಕಡ್ಡಾಯ.

1543 (2214) ಡಾ: ಎಂ.ಪಿ. ಕರ್ಕಿ(ಕುಮಟಾ) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಹಕಾರಿ ಸಂಘಗಳಲ್ಲಿನ ಎಲ್ಲಾ ಸದಸ್ಯರು ಕಡ್ಡಾಯವಾಗಿ ಭಾವಚಿತ್ರದ ಗುರುತಿನ ಚೀಟಿ ಹೊಂದಿರಬೇಕೆಂದು ಕಡ್ಡಾಯ ಮಾಡಿದ್ದರಿಂದ ಈ ಸಲದ ಚುನಾವಣೆಯಲ್ಲಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಭಾವ ಚಿತ್ರದ ಗುರುತಿನ ಚೀಟಿಯನ್ನು ಒದಗಿಸುವವರು ಯಾರು?

ಇ) ಒಂದಕ್ಕಿಂತ ಹೆಚ್ಚಿನ ಸಹಕಾರಿ ಸಂಘಗಳ ಸದಸ್ಯರಾಗಿರುವ ಅನಕ್ಷರಸ್ತರಿಗೆ ಇದರಿಂದ ಗೊಂದಲ ನಿರ್ಮಾಣವಾಗುವುದಿಲ್ಲವೇ?

ಈ) ಹಾಗಿದ್ದಲ್ಲಿ, ಈ ಕ್ರಮವನ್ನು ರದ್ದುಪಡಿಸಲಾಗುವುದೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) ಹೌದು. ದಿನಾಂಕ: 31-5-99ರೊಳಗಾಗಿ ಸಹಕಾರ ಸಂಘಗಳಿಗೆ ಚುನಾವಣೆಗಳನ್ನು ನಡೆಸಲು ಆದೇಶಿಸಿದ್ದರಿಂದ ಅಷ್ಟು ಅತಿ ಕಡಿಮೆ ಕಾಲಾವಕಾಶದಲ್ಲಿ ಗುರುತಿನ ಚೀಟಿ ವಿತರಿಸಲು ಸಾಧ್ಯವಿಲ್ಲದ ಕಾರಣ ಈ ಅಂಶಗಳನ್ನು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಈ ವಿಷಯದಲ್ಲಿ ದಾಖಲಾಗಿದ್ದ ಕೆಲವೊಂದು ರಿಟ್ ಅರ್ಜಿಗಳಲ್ಲಿ ಉಚ್ಚ ನ್ಯಾಯಾಲಯ ನೀಡಿದ ಮಧ್ಯಂತರ ಆದೇಶಗಳನ್ನು ಗಮನದಲ್ಲಿಟ್ಟುಕೊಂಡು, ಮೇ 1999ರೊಳಗಾಗಿ ನಡೆಯುವ ಚುನಾವಣೆಗಳಿಗೆ ಗುರುತಿನ ಚೀಟಿ ಹೊಂದಿರಬೇಕೆಂಬ ನಿಯಮದಿಂದ ದಿನಾಂಕ: 22-5-99ರಂದು ವಿನಾಯ್ತಿ ನೀಡಲಾಗಿರುತ್ತದೆ.

ಆ) ಸಂಬಂಧಪಟ್ಟ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.

ಇ) ಇಲ್ಲ

ಈ) ಇಲ್ಲ

ಸುರತ್ಕಲ್ ಕ್ಷೇತ್ರದಲ್ಲಿ ಬಡವರ ವಸತಿಗಳು.

1544(2216) ಶ್ರೀ ಕುಂಭ್ಳೆ ಸುಂದರರಾವ್ (ಸುರತ್ಕಲ್) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಕ್ಷೇತ್ರದಲ್ಲಿ 1996ನೇ ಸಾಲಿನಿಂದ ಈವರೆಗೆ ಬಡವರ ವಸತಿಗಾಗಿ ವ್ಯಯವಾದ ಹಣವೆಷ್ಟು? ವಸತಿ ಪ್ರಯೋಜನ ಪಡೆದವರ ಒಟ್ಟು ಸಂಖ್ಯೆ ಎಷ್ಟು? (ತಾಲೂಕುವಾರು ವಿವರ ಒದಗಿಸುವುದು)

ಆ) ಈ ಮನೆಗಳನ್ನು ಅವರಿಗೆ ಒದಗಿಸುವಲ್ಲಿ ಅವ್ಯವಹಾರ ನಡೆದ ಪ್ರಕರಣಗಳು ಏನಾದರೂ ಇದೆಯೇ (ಸೂರತ್ಕಲ್ ಕ್ಷೇತ್ರದಲ್ಲಿ);

ಇ) ಇದ್ದಲ್ಲಿ ಆ ಸ್ಥಳಗಳು ಯಾವುವು? (ವಿವರ ಒದಗಿಸುವುದು)?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :—

ಅ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಕ್ಷೇತ್ರದಲ್ಲಿ 1996ನೇ ಸಾಲಿನಿಂದ ಈವರೆಗೆ ಬಡವರ ವಸತಿಗಾಗಿ ಖರ್ಚು ಮಾಡಿದ ಹಣದ ವಿವರ ಮತ್ತು ವಸತಿ ಪ್ರಯೋಜನ ಪಡೆದವರ ವಿವರಗಳನ್ನು ಪಂಚಾಯತ್‌ವಾರು ಈ ಕೆಳಗೆ ಕಾಣಿಸಲಾಗಿದೆ.

ಪಂಚಾಯತ್‌ನ ಹೆಸರು	ಖರ್ಚು ಮಾಡಿದ ಹಣ (ರೂ.ಲಕ್ಷಗಳಲ್ಲಿ)			ಒಟ್ಟು
	ಆಶ್ರಯ	ಅಂಬೇಡ್ಕರ್	ಇಂದಿರಾ ಆವಾಜ್	
1	2	3	4	5
ಜೋಕಟ್ಟೆ	0.80	1.20	1.00	3.00
ಮೂಡುಶೆಡ್ಡ	1.60	0.80	1.20	3.60
ಮಳವೂರು	1.00	0.20	1.60	2.80
ಬಜವೆ	1.00	0.40	0.80	2.20
ಬಾಳ	0.20	0.20	0.80	1.20
ಕಣ್ಣೂರು	2.40	0.60	1.40	4.40
ಎಕ್ಕಾರು	1.40	0.60	0.80	2.80
ಸೂರಿಂಜೆ	2.00	--	1.80	3.80
ಪೆರ್ಮುದೆ	0.40	1.20	1.80	3.40
ಬೀಳ್ಕಾರು	1.60	0.80	1.00	3.40
ಒಟ್ಟು	12.40	6.00	12.20	30.60

ಪಂಚಾಯತ್‌ನ ಹೆಸರು	ವಸತಿ ಪ್ರಯೋಜನ ಪಡೆದವರ ವಿವರ			
	ಆಶ್ರಯ	ಅಂಬೇಡ್ಕರ್	ಇಂದಿರಾ ಆವಾಜ್	ಒಟ್ಟು
ಜೋಕಟ್ಟೆ	4	6	5	15
ಮೂಡುಶೆಡ್ಡ	8	4	6	18
ಮಳವೂರು	5	1	8	14
ಬಜವೆ	5	2	4	11
ಬಾಳ	1	1	4	6
ಕಣ್ಣೂರು	12	3	7	22
ಎಕ್ಕಾರು	7	3	4	14
ಸೂರಿಂಜೆ	10	--	9	19
ಪೆರ್ಮುದೆ	2	6	9	17
ಬೀಳ್ಕಾರು	8	4	5	17
ಒಟ್ಟು	62	30	61	153